(ಶ್ರೀ ಎನ್. ಗೋಪಾಲಗೌಡ)

ಕೆಲವು ಕಡೆ ಅಕ್ರಮವಾಗಿ ಸ್ವಾಧೀನ ಮಾಡಿಕೊಂಡು ಸಾಗುವಳಿ ಮಾಡುತ್ತಿದ್ದರೆ ಅದೂ ಬಹಳ ದಿನಗಳಿಂದ ಸಾಗು ಮಾಡುತ್ತಿದ್ದಾರೆ ಎಂದು ಅವರಿಗೇ ಭೂಮಿಯನ್ನು ಕೊಡಬೇಕೆಂದು ಸರಕಾರದವರು ಯೋಚನೆ ಮಾಡಿದ್ದಾರೆಯೇ ?

ಶ್ರೀ ಬಿ. ರಾಚಯ್ಯ.—ಹಿಂದೆ ಒಂದು ಆಜ್ಞೆ ಏನಿತ್ತು ಅದರಂತೆ ಎಲ್ಲೆಲ್ಲಿ ಸುಮಾರು ಆರ ವರ್ಷಗಳಿಂದಲೂ ಜಮೀನು ಅವರ ಸ್ವಾಧೀನದಲ್ಲೇ ಇದ್ದು ಸಾಗುವಳಿ ಮಾಡುತ್ತಿದ್ದರೆ ಅಂತಹವರಿಗೆ ಆ ಭೂಮಿಯನ್ನು ಕೊಡಬೇಕೆಂದು ಇದೆ. ಅಲ್ಲದೆ ಸುಮಾರು ಎರಡು ವರ್ಷಗಳ ಹಿಂದಿನಿಂದಲೂ ಸಾಗುವಳಿ ಮಾಡುತ್ತಿದ್ದೇವೆ ಎಂದು ಹೇಳಿ ಇಲ್ಲಿ ಭೂಮಿಯನ್ನು ಕೊಡುವುದಕ್ಕೆ ಯಾವ ಅಭ್ಯಂತರವೂ ಇಲ್ಲ ಎಂದು ವರದಿ ಬಂದರೆ ಅಂತಹ ಕಡೆ ಕೊಡಬಹುದು ಇಲ್ಲದೇ ಇದ್ದರೆ ಕೊಡುವುದಿಲ್ಲ. ಕೆಲವು ಕಡೆ ಭೂಮಿಯನ್ನು ಕೊಟ್ಟು ಕನಫರ್ಮ್ ಮಾಡಿದ್ದಾರೆ ಎಂದರೆ ಅದು 1963ರಲ್ಲಿ ಸರಕಾರದವರು ಹೊರಡಿಸಿರುವ ಒಂದು ನಿರ್ದೇಶನದ ಮೂಲಕ ಕೊಡಲಾಗುತ್ತಿದೆ. ಆದರೆ ಎಲ್ಲೆಲ್ಲಿ ನಿಮ್ಮ ವರ್ಗದವರು ಇರುತ್ತಾರೋ ಅವರೇ ಸಾಗು ಮಾಡುತ್ತಿದ್ದರೆ ಅಂತಹವರಿಗೆ ಅನುಕೂಲವಾಗಲೆಂದು ಭೂಮಿಯನ್ನು ಕೊಡುತ್ತಿದ್ದಾರೆ. ಆದರೆ ಈಚೆಗೆ ಅಕ್ರಮ ಪ್ರವೇಶ ಮಾಡುವವರು ಬಹಳ ಹೆಚ್ಚಾಗಿದ್ದಾರೆ ಎಂದು ತಿಳಿದು ಬಂದುದರಿಂದ ಇದರ ಬಗ್ಗೆ ಒಂದು ಸೂಚನೆ ಕೊಟ್ಟು ಯಾರು ಅತಿಕ್ರಮ ಪ್ರವೇಶ ಮಾಡಿ ಸಾಗು ಮಾಡುತ್ತಿದ್ದಾರೋ ಅಂತಹವರಿಗೆ ಅವಕಾಶ ಕೊಟ್ಟರೆ 'ಮೈಟ್ ಈಸ್ ರೈಟ್' ಎನ್ನುವಂತಾಗುತ್ತದೆ. ಇದಕ್ಕೆ ಅವಕಾಶ ಕೊಡಬಾರದು ಎಂದು ಈ ದೃಷ್ಟಿಯಿಂದ ಸರಿಯಾದ ರೂಲ್ಸುಗಳನ್ನು ಮಾಡಿ ಅಧಿಕಾರಿಗಳಿಗೆ ಕಳುಹಿಸಿ ಕೊಡಲಾಗಿದೆ. ಅದರಂತೆ ಎಲ್ಲೆಲ್ಲಿ ಭೂಮಿ ಇದೆಯೋ ಅದನ್ನು ಸರ್ವೇ ಮಾಡಿಸಿ ಅದರ ಮೇಲೆ ಭೂ ಮಾಲೀಕತ್ವ ಯಾರಿಗಿವೆ ಎನ್ನುವುದನ್ನು ಪರಿಶೀಲನೆ ಮಾಡಿ ಐದು ಎಕರೆಗಳಿಗೆ ಮೇಲ್ಪಟ್ಟು ಇದ್ದರೆ ಅಂತಹ ಕಡೆ ವಿಂಗಡಣೆ ಮಾಡಬೇಕು ಎಂದು ಎಲ್ಲ ಅಧಿಕಾರಿಗಳಿಗೂ ಸರಿಯಾದ ಸೂಚನೆಗಳನ್ನು ಕೊಡಲಾಗಿದೆ.

Irrigated and Non-Irrigated Lands in Mysore Revenue Sub-Division

63. **Sri M. BASAVARAJU** (Krishnarajanagar).—

Will the Minister for Revenue and Forests be pleased to state :—

the extent of irrigated and non-irrigated lands in Mysore Revenue Sub-Division (Figures many kindly be furnished talukwise) ?

A.—**Sri B. RACHAIAH** (Minister for Revenue and Forests).—

Name of Taluk		*Irrigated land*	*Non-irrigated land*
		A G	A G
1 Mysore	...	3,234-00	1,14,276-00
2 Hunsur	...	8,085-30	81,844-32
3 H. D. Kote	...	4,793-00	84,187-00
4 Periyapatna	...	5,116-00	91,310-00
5 Krishnarajanagar	...	34,593-00	81,781-00

ಶ್ರೀ ಎಂ. ಬಸವರಾಜು.—ಉತ್ತರದಲ್ಲಿ ಕೊಟ್ಟಿರುವುದನ್ನು ನೋಡಿದರೆ ಈ ಐದು ತಾಲ್ಲೂಕುಗಳಲ್ಲಿ ನೀರಾವರಿ ಮಾಡದೇ ಇರುವ ಜಮೀನುಗಳು ಬಹಳ ಕಡಿಮೆ ಅಲ್ಲವೇ ?

ಶ್ರೀ ಬಿ. ರಾಚಯ್ಯ.—ಹೌದು,

ಶ್ರೀ ಎಂ. ಬಸವರಾಜು.—ಇಲ್ಲಿ ನೀರಾವರಿ ಹೆಚ್ಚು ಮಾಡಲು ಸರಕಾರ ಯಾವ ಕಾರ್ಯಕ್ರಮ ಕೈಗೊಳ್ಳಬೇಕೆಂದು ಇದೆ ?

ಶ್ರೀ ಬಿ. ರಾಚಯ್ಯ.—ಇದಕ್ಕೆ ಇಲ್ಲಿ ಬಾವಿಗಳನ್ನು ತೋಡಿಸಬೇಕು ಮತ್ತು ಎಲ್ಲೆಲ್ಲಿ ಲಿಫ್ಟ್ ಇರಿಗೇಷನ್ ಸಾಧ್ಯವೋ ಅಲ್ಲಿ ಅದನ್ನು ಮಾಡಲು ಸಹಾಯ ಮಾಡುವುದು ಇತ್ಯಾದಿ ಮಾಡಿ ಇರಿಗೇಷನ್‌ಗೆ ಸಹಾಯ ಮಾಡಬೇಕಾಗಿದೆ.

ಶ್ರೀ ಎಂ. ಬಸವರಾಜು.—ನಮ್ಮ ತಾಲ್ಲೂಕು ಭಾಗದಲ್ಲಿ ಕಾವೇರಿ ನದಿ ಇರುವುದರಿಂದ ನಮ್ಮ ಭಾಗದಲ್ಲಿ ಹಾಗೂ ಹುಣಸೂರು ತಾಲ್ಲೂಕುಗಳಲ್ಲಿ ಲಿಫ್ಟ್ ಇರಿಗೇಷನ್ ಕೆಲಸಗಳೇ ಹೆಚ್ಚು ನಡೆದಿಲ್ಲ. ಇಲ್ಲಿ ಲಿಫ್ಟ್ ಇರಿಗೇಷನ್ ಮಾಡಲು ಹೆಚ್ಚು ಅವಕಾಶಗಳಿರುವುದರಿಂದ ಇದುವರೆಗೂ ಸರಕಾರ ಇದಕ್ಕೆ ಮಾನ್ಯತೆ ಕೊಟ್ಟಿಲ್ಲ. ಇಲ್ಲಿನ ಜನರ ಹಿತದೃಷ್ಟಿಯಿಂದ ಈಗಲಾದರೂ ಇಲ್ಲಿ ಹೆಚ್ಚು ಲಿಫ್ಟ್ ಇರಿಗೇಷನ್ ಕೆಲಸಗಳನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಎಲ್ಲೆಲ್ಲಿ ಲಿಫ್ಟ್ ಇರಿಗೇಷನ್ ಕೆಲಸಗಳನ್ನು ಮಾಡಬಹುದೋ ಅಂತಹ ಕಡೆಗಳಲ್ಲಿ ಪಿ.ಡಬ್ಲ್ಯು. ಇಲಾಖೆಯವರು ಸರ್ವೇ ಮಾಡಿಸಿ, ಮಾಡಿಸಬೇಕು ಎಂದಿದ್ದಾರೆ ಮತ್ತು ರೆವೆನ್ಯೂ ಇಲಾಖೆಯವರು ಅಲ್ಲಲ್ಲಿ ಬಾವಿಗಳನ್ನು ತೋಡಿಸಿ ಸಹಾಯ ಮಾಡಬೇಕೆಂದು ಇದ್ದಾರೆ.

ಶ್ರೀ ಎನ್. ಎ. ಚನ್ನೇಗೌಡ.—ನೀರಾವರಿ ಮಾಡದ ಜಮೀನು ವ್ಯವಸಾಯಕ್ಕೆ ಯೋಗ್ಯ ಜಮೀನೆ ?

ಶ್ರೀ ಬಿ. ರಾಚಯ್ಯ.—ವ್ಯವಸಾಯ ಆಗುತ್ತಾ ಇರುವುದು ನೀರಿನ ಸೌಕರ್ಯ ಇಲ್ಲದೇ ತರೀ ಫಸಲು ಕಬ್ಬು ಬೆಳೆಯದೇ ಇರತಕ್ಕಂಥ ಭೂಮಿಯ ಅಂಕಿ ನಂಬ್ಯೆ ಕೊಟ್ಟಿದೆ.

ಶ್ರೀ ಎಂ. ಬಸವರಾಜು.—ಮೈಸೂರು ಜಿಲ್ಲೆಯಲ್ಲಿ 13 ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೀರಾ ? ಅದನ್ನು ಪಿ.ಡಬ್ಲ್ಯು. ಇಲಾಖೆ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.— ತಮ್ಮ ಅಭಿಪ್ರಾಯವನ್ನು ಅವರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಮೈಸೂರು ಜಿಲ್ಲೆಯಲ್ಲಿ ನೀರಾವರಿ ಮಾಡದೇ ಇರತಕ್ಕ ಜಮೀನು ಜಾಸ್ತಿ ಇರುವುದರಿಂದ ಹಾಗೂ ಕ್ಷಾಮಡಾಮರ ಆಗಿಂದಾಗ್ಗೆ ಹೆಚ್ಚಿಗೆ ತಲೆದೋರುವ ಪರಿಸ್ಥಿತಿ ಇರುವುದರಿಂದ ಹಿಂದೆ ಅಂದಾಜು ಮಾಡಿದ ಕಂಬದ ಕಡ ಮತ್ತು ಹಾರಂಗಿ ಮೇಲ್ಮಟ್ಟದ ಯೋಜನೆಯನ್ನು ಕೈಗೊಂಡು ಏನಾದರೂ ನೀರಾವರಿ ಮಾಡುವುದಕ್ಕೆ ಅನುಕೂಲ ಕಲ್ಪಿಸಿ ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಕಾವೇರಿ ಬೇಸಿನ್ ಇರತಕ್ಕ ನೀರನ್ನು ಉಪಯೋಗಿಸಿಕೊಳ್ಳಬೇಕು ಎಂದು ಹೇಮಾವತಿ ಮತ್ತು ಹಾರಂಗಿ ಮೇಲ್ಮಟ್ಟದ ಯೋಜನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಅವರ ಒಪ್ಪಿಗೆ ಆದ ಕೂಡಲೇ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಎ. ಚನ್ನೇಗೌಡ.—ಸಾಧಾರಣವಾಗಿ ಈ ಜಮೀನಿನಲ್ಲಿ ಬೋರ್‌ವೆಲ್‌ಗಳನ್ನು ತೆಗೆಯಲು ಪೆಚ್ಚು ಹೆಚ್ಚಾಗುವುದರಿಂದ ಸರ್ಕಾರದವರು ಬೋರ್‌ವೆಲ್ಸ್‌ನ್ನು ತೆಗೆಯುವ ಏಪರ್ಾಡನ್ನು ಕೈಗೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಎಲ್ಲೆಲ್ಲಿ ಕ್ಷಾಮಕ್ಕೆ ತುತ್ತಾಗಿರುವ ಭಾಗಗಳು ಇವೆ ಅದರೊಳಗೆ ಕೃಷ್ಣರಾಜನಗರವೂ ಒಂದು ಅಲ್ಲಿ ಒಂದೆರಡು ವರ್ಷದಿಂದ ಸಾಕಷ್ಟು ಮಳೆ ಇಲ್ಲದೆ ಬೆಳೆ ಅಭಾವಕ್ಕೆ ತುತ್ತಾಗುವ ಪ್ರದೇಶವಾಗಿದೆ. ಈ ರೀತಿ ಇರುವ ಕಡೆ ಸರ್ಕಾರ ಬಾವಿ ತೋಡಿಸಿಕೊಟ್ಟು ಬಾವಿಯ ಉಪಯೋಗವನ್ನು ಯಾವ ರೈತರು ಪಡೆಯುತ್ತಾರೋ ಅಂತಹವರಿಂದ ಮುಕ್ಕಾಲು ಭಾಗದಷ್ಟು ಹಣವನ್ನು ವಸೂಲು ಮಾಡುವ ಉದ್ದೇಶದಿಂದ, ಮತ್ತು ಕಾಲು ಭಾಗದಷ್ಟು ಹಣವನ್ನು ಸರ್ಕಾರದವರು ಸಹಾಯಧನವಾಗಿ ಮಾಡತಕ್ಕದ್ದು ಎನ್ನುವ ಉದ್ದೇಶದಿಂದ, ಈ ವರ್ಷ 100 ಬಾವಿಗಳನ್ನು 64-ಬಿ ಫ್ಯಾಮಿನ್‌ನಲ್ಲಿ ತೆಗೆದುಕೊಳ್ಳಬೇಕೆಂದು ಸರ್ಕಾರದವರು ಆರ್ಡರ್ ಮಾಡಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ.—ಈ ಜಮೀನುಗಳಿಗೆರ್ಾ ಅನುಕೂಲವಾಗುವ ಕಂಬದಕಡ ಮತ್ತು ಹಾರಂಗಿ ಮೇಲ್ಮಟ್ಟದ ಯೋಜನೆಗಳನ್ನು ಕೈಗೊಳ್ಳುತ್ತೀರಾ ಎಂದು ಕೇಳಿದೆ ಅದನ್ನು ಹೇಳಬೇಕು.

ಶ್ರೀ ಬಿ. ರಾಚಯ್ಯ.—ಹಾರಂಗಿ ಮತ್ತು ಹೇಮಾವತಿ ಈ ಎರಡು ಪ್ರಾಜೆಕ್ಟ್‌ಗಳನ್ನು ತ್ವರಿತವಾಗಿ ಮಾಡಬೇಕು ಎನ್ನುವ ಅಭಿಪ್ರಾಯ ಇದೆ. ಇದಕ್ಕೆ ರೈತರಿಂದ ಮುಂಗಡ ಧನಸಹಾಯವನ್ನು ಕೊಡಿಸಿಕೊಟ್ಟ ಪಕ್ಷದಲ್ಲಿ ಬೇಗ ಆಗುತ್ತದೆ. ಕಂಬದಕಡ ಹಾಗೂ ಹಾರಂಗಿ ಮೇಲ್ಮಟ್ಟದ ಯೋಜನೆಗಳನ್ನು ಕಟ್ಟುವುದರಿಂದ ಈ ಜಮೀನಿಗೆ ಅನುಕೂಲವಾಗುತ್ತದೆಂದು ಏರ್ಪಾಡು ಮಾಡುತ್ತೇವೆ. ಈ ಯೋಜನೆಗಳಿಂದ ಎಲ್ಲೆಲ್ಲ ಅನುಕೂಲವಾಗುತ್ತದೆ ಎನ್ನುವ ಅಂಕಿ ಅಂಶಗಳು ನನ್ನ ಮುಂದೆ ಇಲ್ಲ. ಹಾರಂಗಿ ಮತ್ತು ಹೇಮಾವತಿ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿದೆ.

M. S. R. T. C. Division at Raichur District

64. Sri TIRUMALADEVA RAYA (Gangavathi).—

Will the Minister for Transport and Tourism be pleased to state :—

(*a*) the number of buses that are plying in Raichur District ;

(*b*) whether there is any proposal to have a M. S. R. T. C. Division in Raichur District ?

A.—Sri MOHAMED ALI (Minister for Transport and Tourism).—

(*a*) 68 schedules are operated by Raichur and Lingsugur depots of Rsichur district, 38 by Raichur Depot and 30 by Lingsugur Depot.

(*b*) There is no proposal.

Sri TIRUMALADEVA RAYA.—Is the Government aware that there was a Division at Raichur and if so, why it was shifted from there ?

Sri MOHAMED ALI.—I am not in a position to give that information. If the Hon'ble Member can put a specific question, I will be able to give information.

ಶ್ರೀ ಎಂ. ನಾಗಪ್ಪ.—ರಾಯಚೂರು ಮುನಸಿಪಾಲಿಟಿಯಿಂದ ಡಿವಿಜನಲ್ ವರ್ಕ್‌ಷಾಪ್ ನಲುವಾಗಿ ಸ್ಪೆಷಲ್ ಗ್ರಾಂಟ್ ಕೊಟ್ಟಿದ್ದರೂ ಅಂತಹ ಸಂದರ್ಭದಲ್ಲಿ ಆ ವರ್ಕ್‌ಶಾಪನ್ನು ರಾಯಚೂರಿನಿಂದ ಗುಲ್ಬರ್ಗಾಕ್ಕೆ ಷಿಫ್ಟ್ ಮಾಡುವುದಕ್ಕೆ ಏನು ಕಾರಣಗಳು ಇದ್ದುವು ?

Sri MOHAMED ALI.—This supplementary does not arise out of this question.

Sri RAJA PID NAIK.—May I know what are the considerations that are taken into account for establishing a Division ?

Sri MOHAMED ALI.—Number of schedules and the administrative requirements are the very important factors for creating a Division.

Sri S. R. BOMMAI.—Sir, when a supplementary question was asked the Speaker allowed it, but the Minister says it does not arise out of the question. Can he rule out a question like that ?

Mr. SPEAKER.—The Hon'ble Minister is entitled to express his opinion. It does not amount to a ruling by the Chair. But if the Member accepts that reply, I have no objection.

Sri S. R. BOMMAI.—When the Speaker has allowed, the Minister is bound to answer.